**ತಾರಾದಂಪತಿಯ ಕೂಸಿಗೆ ಅಂಬರೀಷ್ ಅವರು ಕೊಡುಗೆಯಾಗಿ ನೀಡಿದ ತೊಟ್ಟಿಲಿನ ಮೂಲಕ ಕಲಘಟಗಿ ಮತ್ತೆ ಸುದ್ದಿಯಲ್ಲಿದೆ. ಚನ್ನಪಟ್ಟಣದ ಬಣ್ಣದ ಬೊಂಬೆಗಳಂತೆ ಕಲಘಟಗಿ ತೊಟ್ಟಿಲುಗಳ ಜನಪ್ರಿಯತೆಯೂ ಕರ್ನಾಟಕವನ್ನು ದಾಟಿದೆ. ಆದರೆ, ಈ ತೊಟ್ಟಿಲುಗಳನ್ನು ರೂಪಿಸುವ ಕಲಾಕಾರರು ಮಾತ್ರ ಈಗ ಕವಲುದಾರಿಯಲ್ಲಿದ್ದಾರೆ.**

# ಕಲಘಟಗಿ ತೊಟ್ಟಿಲಾಗ ಕಂದಮ್ಮ ನಗುತಾದ...

■ **ಇ.ಎಸ್. ಸುಧೀಂದ್ರ ಪ್ರಸಾದ್**

ಚಿತ್ರಗಳು: ಬಿ.ಎಂ. ಕೇದಾರನಾಥ

ಕಲಘಟಗಿ ತೊಟ್ಟಿಲು ಮತ್ತೆ ಸುದ್ದಿಯಲ್ಲಿದೆ! ಚಲನಚಿತ್ರ ತಾರಾಜೋಡಿ ಯಶ್–ರಾಧಿಕಾ ದಂಪತಿಯ ಮಗಳ ಮೂಲಕ ಕಲಘಟಗಿಯ ತೊಟ್ಟಿಲು ಸುದ್ದಿಯಲ್ಲಿದೆ. ತಾರಾ ದಂಪತಿಯ ಮಗುವಿಗಾಗಿ ಅಂಬರೀಷ್ ಅವರು ನೀಡಿರುವ ವಿಶೇಷ ಉಡುಗೊರೆ ಈ ತೊಟ್ಟಿಲು. ಮಗು ಜನಿಸುವುದಕ್ಕೆ ಕೆಲವು ದಿನಗಳ ಮೊದಲಷ್ಟೇ ಅಂಬರೀಷ್ ನಿಧನರಾಗಿದ್ದಾರೆ. ಆದರೆ, ಅವರು ಆರ್ಡರ್ ನೀಡಿದ್ದ ತೊಟ್ಟಿಲು ಯಶ್–ರಾಧಿಕಾ ಮನೆ ಸೇರಿದೆ. ಕಲಘಟಗಿ ತೊಟ್ಟಿಲಲ್ಲಿ ಕಂದಮ್ಮ ನಗುತ್ತಿದ್ದಾಳೆ.

ಕಲಘಟಗಿ ತೊಟ್ಟಿಲುಗಳ ಜನಪ್ರಿಯತೆ ಇಂದು ನಿನ್ನೆಯದಲ್ಲ. ಮನಮೋಹಕ ಚಿತ್ತಾರಗಳಿಂದ ಅಲಂಕೃತವಾದ ಕಲಘಟಗಿಯ ತೊಟ್ಟಿಲು ಮನೆಯಲ್ಲಿರುವುದೇ ದೊಡ್ಡ ಘನತೆ ಎಂಬ ನಂಬಿಕೆ ದಶಕಗಳಿಂದ ಚಾಲ್ತಿಯಲ್ಲಿದೆ. ಒಂದೆಡೆ, ಈ ತೊಟ್ಟಿಲುಗಳ ಜನಪ್ರಿಯತೆಗೆ ಹೊಸ ಗರಿಗಳು ಸೇರಿಕೊಳ್ಳುತ್ತಿದ್ದರೆ, ಇನ್ನೊಂದೆಡೆ ಈ ತೊಟ್ಟಿಲುಗಳನ್ನು ಸಿದ್ಧಪಡಿಸುವ ಕಲಾಕಾರರ ಸಂಖ್ಯೆ ಕ್ಷೀಣಿಸುತ್ತಿದೆ.

ಕಲಘಟಗಿ ತೊಟ್ಟಿಲುಗಳ ಆಕರ್ಷಣೆಯಾದರೂ ಏನು? ಒಂದು, ಅವುಗಳ ಗುಣಮಟ್ಟ. ಇನ್ನೊಂದು ಅವುಗಳ ಮೇಲಿನ ಚಿತ್ತಾರಗಳು. ರಾಮನ ಪಟ್ಟಾಭಿಷೇಕ, ಕೃಷ್ಣನ ಬಾಲಲೀಲೆ, ಶಿವ–ರಾಮನ ಪ್ರಸಂಗಗಳು, ಧರ್ಮರಾಯನ ಸಭೆ, ಮೆಕ್ಕಾ, ಮದೀನಾ, ಜೆರುಸಲೇಂ, ವ್ಯಾಟಿಕನ್ ನಗರ – ಹೀಗೆ, ಏನೆಲ್ಲ ಚಿತ್ತಾರಗಳು! ತೊಟ್ಟಿಲು ಖರೀದಿಸುವವರು ಯಾವ ಧರ್ಮದವರು ಎನ್ನುವುದರ ಮೇಲೆ ತೊಟ್ಟಿಲ ಮೇಲೆ ರೂಪುಗೊಳ್ಳುವ ಪೌರಾಣಿಕ ಕಥೆಗಳ ನಿರ್ಧಾರವಾಗುತ್ತದೆ.

ಇಲ್ಲಿನ ಚಿತ್ರಗಾರ ಓಣಿಗೆ ಬನ್ನಿ. ಸಾವುಕಾರ ಕುಟುಂಬ ಮತ್ತು ಗೋಲಪ್ಪನ ಓಣಿಯ ಬಡಿಗೇರ ಕುಟುಂಬಗಳು ಇಂದಿಗೂ ಈ ಕಲೆಯನ್ನು ಜೀವಂತವಾಗಿಟ್ಟುಕೊಂಡು ಬಂದಿವೆ. ಸುಮಾರು ಆರು ತಲೆಮಾರುಗಳಿಂದಲೂ ಈ ಕುಟುಂಬಗಳ ಕಲಾವಿದರು ತೊಟ್ಟಿಲುಗಳನ್ನು ರೂಪಿಸಿಕೊಂಡು ಬರುತ್ತಿದ್ದಾರೆ. ನೂರಾರು ವರ್ಷಗಳು ಕಳೆದರೂ ಬಣ್ಣ ಕಳೆದುಕೊಳ್ಳದ ಅಗ್ಗಳಿಕೆ ಈ ಕಲಾಕೃತಿಗಳದು. ತೊಟ್ಟಿಲುಗಳ ಮೇಲೆ ಮಾತ್ರವಲ್ಲ – ಮೇಜು, ಟೀಪಾಯಿ, ದೇವರಪೀಠ ಹೀಗೆ ಹಲವು ಪೀಠೋಪಕರಣಗಳ ಮೇಲೆ ಕಲಘಟಗಿಯ ಈ ಕಲೆ ಹಲವು ರೀತಿಯಲ್ಲಿ ಬಳಕೆಯಾಗುತ್ತಿದೆ.

ವರನಟ ರಾಜಕುಮಾರ್ 20 ವರ್ಷಗಳ ಹಿಂದೆ ತಮ್ಮ ಮೊಮ್ಮಗಳಿಗಾಗಿ ಕಲಘಟಗಿ ತೊಟ್ಟಿಲು ಖರೀದಿಸಿದ್ದರು. ಐಪಿಎಸ್ ಅಧಿಕಾರಿಗಳಾಗಿದ್ದ ಜ್ಯೋತಿಪ್ರಕಾಶ ಮಿರ್ಜಿ, ಕೆಂಪಯ್ಯ, ಶಂಕರ ಬಿದರಿ ಹೀಗೆ ಅನೇಕ ಅಧಿಕಾರಿಗಳ ಕುಟುಂಬಗಳು ಕಲಘಟಗಿ ತೊಟ್ಟಿಲನ್ನು ಹೊಂದುವುದರ ಜೊತೆಗೆ, ಇಲ್ಲಿನ ಕಲಾವಿದರಿಂದ ತಮ್ಮ ಮನೆಗಳಿಗೆ ದಿವಾನ ಮಂಚ, ಸೋಫಾ, ಟೀಪಾಯಿಗಳನ್ನು ಮಾಡಿಸಿಕೊಂಡಿದ್ದಾರೆ. ಇನ್ನೂ ಕೆಲವರು ದೇವರಪೀಠಗಳನ್ನು ಮಾಡಿಸಿಕೊಂಡಿದ್ದಾರೆ.

ಕಲಘಟಗಿಯ ತೊಟ್ಟಿಲುಗಳ ಬಗ್ಗೆ ಮಾಹಿತಿ ನೀಡಿದ ಚಿತ್ರಗಾರ ಓಣಿಯ ಲಕ್ಷ್ಮಣ ಸಾವುಕಾರ, ‘ನಮ್ಮ ಪೂರ್ವಜರಾದ ಪಿರಾಜಿ ಸಾವುಕಾರ ಎಂಬುವವರಿಂದ ಈ ಕಲೆ ಕುಟುಂಬಕ್ಕೆ ಬಂತು. ಇಂದಿಗೂ ಅದೇ ಶ್ರದ್ಧೆಯಿಂದ ಈ ಕೆಲಸದಲ್ಲಿ ತೊಡಗಿಕೊಂಡಿದ್ದೇವೆ.

